# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ 04/20-21

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಶ್ರೀರಾಮಮಂದಿರ ವಾರ್ಡ್ ಮಟ್ಟದ ಸಮಿತಿ
ಶ್ರೀರಾಮಮಂದಿರ ವಾರ್ಡ್ ಸಂ.108
ಬೆಂಗಳೂರು, ದಿನಾಂಕ: 28/11/2020.

## ದಿನಾಂಕ:28.11.2020 ರಂದು ನಡೆದ ಸಭಾ ನಡವಳಿಗಳು:

## ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಮಂಗಳೇಶ್ ಬಿ ಜೆ.ಡಿ.ಟಿ.ಪಿ.ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೆ.ಪಿ ಉಮೇಶ್ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಇಂಜಿನಿಯರ್.
3. ಶ್ರೀಮತಿ ಸುನಿತಾ ಸ.ಕಾ.ಇಂ (ವಿದ್ಯುತ್) ಸದಸ್ಯರು.
4. ಶ್ರೀ ಬಿ ಕಿರಣ್ ಸದಸ್ಯರು.
5. ಶ್ರೀ ಎಸ್ ಶಂಕರ್ ತೋಟಗಾರಿಕೆ ಇಲಾಖೆ.
6. ಶ್ರೀ ಮಹೇಶ್ ಎಂ ಬೀದಿ ದೀಪ ನಿರ್ವಹಣೆ.
7. ಶ್ರೀ ಸುಬ್ರಮಣ್ಯ ಪದಕಿ ಹಿರಿಯ ಆರೋಗ್ಯ ಪರೀವೀಕ್ಷಕರು ಸದಸ್ಯರು.
8. ಶ್ರೀ ವಿನಾಯಕ್ ಕಿರಿಯ ಆರೋಗ್ಯ ಪರಿವೀಕ್ಷರು ಸದಸ್ಯರು.
9. ಶ್ರೀ ಜಯಪ್ರಕಾಶ್ ಎಸ್ ಆರ್ ASI ಮಾಗಡಿರಸ್ತೆ ಪೊಲೀಸ್ ಠಾಣೆ
10. ಶ್ರೀ ಮಲ್ಲಯ್ಯ ಅರಣ್ಯ ಇಲಾಖೆ.

- ಮಲ್ಲಯ್ಯ ಅರಣ್ಯ ಇಲಾಖೆ ಮಾತಾನಾಡುತ್ತಾ:

ಸದರಿ ವಾರ್ಡಿನ ಶ್ರೀರಾಮಮಂದಿರ ರಸ್ತೆಯಲ್ಲಿರುವ ಮರದ ಕೊಂಬೆ ಕಡಿದು ಹಾಕಿದ್ದರು ಈ ವಿಷಯವಾಗಿ ಲಕ್ಷ್ಮೀಪತಿ ಎಂಬುವರು ಅರ್ಜಿ ಮುಖಾಂತರ ಯಾವ ಮಾನದಂಡದಲ್ಲಿ ಮರದ ಕೊಂಬೆಗಳನ್ನು ಕಡಿದ್ದೀರಾ ಯಾವ ಅಧಿಕಾರಿಗಳು ಕೂಡ ಈ ಕಡೆ ಗಮನ ಹರಿಸಿಲ್ಲವೆಂದು ಅರ್ಜಿಯನ್ನು ದೂರಿದ್ದರು. ಅದಕ್ಕೆ ಮಲ್ಲಯ್ಯ ಅರಣ್ಯ ಇಲಾಖೆ ಇವರು ಮಾನ್ಯ ಆಯುಕ್ತರ ಆದೇಶವಾಗಿರುತ್ತದೆ ಯಾವ ಮನೆ ಮತ್ತು ಇತರೆ OFC ತಂತಿಯ ಮೇಲೆ ಉದ್ದವಾಗಿ ಬೆಳೆದಿದ್ದ ಕೊಂಬೆಯನ್ನು ಕಡಿಯಬಹುದೆಂದು ಸಭೆಯಲ್ಲಿ ಹೇಳಿದರು.

- ಶ್ರೀ ಬಿ ಕಿರಣ್ (ಸದಸ್ಯರು) ಮಾತಾನಾಡುತ್ತಾ:

ಈ ವಾರ್ಡಿನ ಸಂ.108 ರಲ್ಲಿ ಮದು ಪಾರ್ಕ್ ಹತ್ತಿರ ಬೋರ್‌ವೆಲ್ ಕೊರೆದಿದ್ದು, ಅಲ್ಲಿ ರಸ್ತೆ ತಗ್ಗಾಗಿದೆ. ಆನರಿಗೆ ಓಡಾಡಲು ತೊಂದರೆಯಾಗುತ್ತೆಂದು ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ವಾರ್ಡಿನ ಸದಸ್ಯ ಕಾರ್ಯದರ್ಶಿ ಹಾಗೂ ಇಂಜಿನಿಯರ್ ಮಾತನಾಡಿ ಈಗಾಗಲೇ ಬೋರ್‌ವೆಲ್ ಕೊರೆದು ಪಂಪ್ ಮೋಟರ್ ಅಳವಡಿಸಿದ್ದು ರಸ್ತೆ ಮಟ್ಟಕ್ಕೆ ಬಾಕ್ಸ್ ಚೇಂಬರ್ಸ್, ಮಾಡಲು ಉದ್ದೇಶಿಸಲಾಗಿದೆ ಸದಸ್ಯದಲ್ಲೆ ಪೂರ್ಣಗೊಳಿಸುತ್ತೇವೆಂದು ಹೇಳಿ ವಿಷಯ ಮುಕ್ತಾಯವಗೊಳಿಸಿದರು.

ಶ್ರೀರಾಮಮಂದಿರ ರಸ್ತೆಯಲ್ಲಿ ಬೋರ್ ವೇಲ್ ಪೈಪ್‌ಗಳ ರಸ್ತೆಯ ಪಾದಚಾರಿ ಮೇಲೆ ಇಟ್ಟಿದ್ದಾರೆ ಇವುಗಳನ್ನು ಬೇರೆಡೆಗೆ ಇರಲು ಸಭೆಯಲ್ಲಿ ಚರ್ಚಿಸಿದರು ಹಾಗೂ ಬೀದಿ ದೀಪಗಳನ್ನು ನೆಳಗಿನ ಜಾವದಲ್ಲಿ ವಿದ್ಯುತ್ ಆಫ್ ಮಾಡುತ್ತಾರೆ ಯಾರೆಂಬುದನ್ನು ತಿಳಿಯಲು ಪೋಲೀಸರ ಕಡೆ ಶ್ರೀ ಬಿ ಕಿರಣ್ ರವರು ಗಮನ ಸೆಳೆದರು.

ಮುಂದುವರೆಸುತ್ತಾ, ಸದರಿ ಪಾರ್ಕಿನಲ್ಲಿ ಅಲ್ಲಲ್ಲಿ ನಿರಾಶ್ರಿತಾ ಕೇಂದ್ರ ಮತ್ತಿತರ ಕಡೆ ಬೀಡಿ ಸಿಗರೇಟ್ ಗಾಂಜಾ ಸೇದುತ್ತಾರೆಂದು ಸಭೆಯಲ್ಲಿ ಬಿ ಕಿರಣ್ ಚರ್ಚಿಸಿದರು.

- **ಪೋಲೀಸ್ ಅಧಿಕಾರಿಗಳ ಮಾತನಾಡುತ್ತಾ:**

ಈಗಾಗಲೇ ಇಂತಹವುಗಳ ಆರೋಪಿಗಳನ್ನು ಹಿಡಿದು ಪೊಲೀಸ್ ಕೇಸ್ ಹಾಕಲಾಗಿದೆ ಮುಂದೆ ಇಂತಹ ಘಟನೆ ನಡೆಯದಂತೆ ನೋಡಿಕೊಳ್ಳುತ್ತೇನೆ ಮತ್ತು ಮೇಲಾಧಿಕಾರಿಗಳ ಗಮನಕ್ಕೆ ತರಬಯಸಲಾಗುವುದೆಂದು ಹೇಳಿದರು.

- **ನೋಡಲ್ ಅಧಿಕಾರಿ ಮಾತಾನಾಡುತ್ತಾ:**

ಮೇಲಿನ ಎಲ್ಲಾ ವಿಷಯಗಳನ್ನು ಗಮನಕ್ಕೆ ತರುತ್ತಾ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಭೆಯ ಸೂಕ್ತ ಆದೇಶದ ಪ್ರತಿಯನ್ನು ಮುಂದಿನ ಸಭೆಗೆ ಹಾಜರು ಪಡಿಸಲು ಸೂಚಿಸಿದರು ಹಾಗೂ ಅರಣ್ಯ ಇಲಾಖೆಯಿಂದ ಈ ವಾರ್ಡಿಗೆ ಯಾವುದೇ ತೊಂದರೆ ಆಗದಂತೆ ನೊಡಿಕೊಳ್ಳಲು ಸಭೆಯಲ್ಲಿ ಸೂಚಿಸಿದರು ಬೀದಿ ದೀಪಗಳಿಗೆ ತೊಂದರೆಯಾಗದಂತೆ ಮಹೇಶ್ (ಎಲೆಕ್ಟ್ರೀಕಲ್) ಇವರಿಗೆ ಸೂಚಿಸಿದರು ಹಾಗೂ ಜಿ. ಲಕ್ಷ್ಮೀಪತಿ ಕೋರಿರುವ ಮಾಹಿತಿಯನ್ನು ಪ್ರತ್ಯೇಕವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿಗಳಿಗೆ ತಿಳಿಸಿದರು ಮತ್ತು ಪೊಲೀಸ್ ಅಧಿಕಾರಿಗೆ ಇನ್ನು ಮುಂದೆ ಯಾವ ಅನಾಹುತ ಆಗದಂತೆ ಮುಂಜಾಗ್ರತೆ ವಹಿಸಬೇಕೆಂದು ಕಸ ಕಡ್ಡಿ ತೆಗೆಯಲು ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಿದರು.

**ಮುಂದುವರೆದಂತೆ, ಕೊನೆಯಲ್ಲಿ ಅಧ್ಯಕ್ಷರು ಹಾಗೂ ನೋಡಲ್ ಅದಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಶ್ರೀ ಕೆ.ಪಿ ಉಮೇಶ್ ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.**
**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ.**

| | |
|---|---|
| ಸದಸ್ಯರು ಕಾರ್ಯದರ್ಶಿ ಹಾಗೂ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ |
| ವಾರ್ಡ್ ಸಂ. 108 | ವಾರ್ಡ್ ಮಟ್ಟದ ಸಮಿತಿ |
| ಸಹಾಯಕ ಅಭಿಯಂತರರು | ವಾರ್ಡ್ ಸಂ.108, ಶ್ರೀರಾಮಮಂದಿರ. |

<u>ಪ್ರತಿಯನ್ನು:</u>

1. ಮಾನ್ಯ ಶಾಸಕರು ರಾಜಾಜಿನಗರ ವಿಧಾನ ಸಭಾ ಕ್ಷೇತ್ರ ರಾಜಾಜಿನಗರ ರವರಿಗೆ ಸಲ್ಲಿಸಲಾಗಿದೆ.
2. ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 108 ರವರಿಗೆ ಸಲ್ಲಿಸಲಾಗಿದೆ.
3. ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
4. ಮುಖ್ಯ ಅಭಿಯಂತರರು (ಪ) ರವರಿಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
7. ಆರೋಗ್ಯ ವೈದ್ಯಾಧಿಕಾರಿಗಳು ಶ್ರೀರಾಮಮಂದಿರ ವಲಯ ರವರಿಗೆ ಸಲ್ಲಿಸಲಾಗಿದೆ.

8. ಸಹ ಕಂದಾಯ ಅಧಿಕಾರಿ ಶ್ರೀರಾಮಮಂದಿರ ವಲಯ ರವರಿಗೆ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ ನಿರ್ವಹಣೆ) ರವರಿಗೆ ಸಲ್ಲಿಸಲಾಗಿದೆ.
10. ತೋಟಗಾರಿಕೆ ಅಧಿಕ್ಷಕರು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
11. ಅರಣ್ಯ ಅಧಿಕಾರಿಗಳು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
12. ಕಾರ್ಯಪಾಲಕ ಅಭಿಯಂತರರು (ಬಿಡಬ್ಲ್ಯೂಎಸ್‌ಎಸ್‌ಬಿ ರಾಜಾಜಿನಗರ ವಿಭಾಗ) ರವರಿಗೆ ಸಲ್ಲಿಸಲಾಗಿದೆ.
13. ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ ರಾಜಾಜಿನಗರ ವಿಭಾಗ) ರವರಿಗೆ ಸಲ್ಲಿಸಲಾಗಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ಮಾಗಡಿ ವಿಭಾಗ ರವರಿಗೆ ಸಲ್ಲಿಸಲಾಗಿದೆ.
16. ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರಿ ಪೊಲೀಸ್ ಠಾಣೆ ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
17. ಕಛೇರಿ ಕಡತಕ್ಕೆ.